**ಸಾಕ್ಷಿಯನ್ನು ದಿನಾಂಕಃ 08.11.2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎಮ್.ವಿ ವಕೀಲರಿಂದಃ**

ಈ ದಾವೆಯನ್ನು ಯಾರು ಹಾಕಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯ ಪರಿಚಯ ನನಗೆ ವೈಯಕ್ತಿಕವಾಗಿ ಇರುವುದಿಲ್ಲ ಆದರೆ ಅಂಬಾದಾಸ ಇವರ ಪರಿಚಯ ಇರುತ್ತದೆ. ಅಂಬಾದಾಸ ಮತ್ತು ಅವನ ಹೆಂಡತಿಯಾದ ಪ್ರತಿವಾದಿಯರ ನಡುವೆ ಹಲವಾರು ಪ್ರಕರಣಗಳು ನಡೆದಿರುತ್ತವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ರವಿ ಮೇಸ್ತ್ರಿ ಇವರು ಮನೆಯ ವ್ಯವಹಾರ ಇರುತ್ತದೆ ಬಾ ಅಂದ ಮೇರೆಗೆ ನಾನು ಹೋಗಿದ್ದೇನು. ಆ ದಿನ ಖರೀದಿ ಪತ್ರ ಬರೆದಿದ್ದರು ಆದರೆ ನಾನು ಅದನ್ನು ಓದಿರುವುದಿಲ್ಲ. ಸದರಿ ಖರೀದಿ ಪತ್ರದ ಮೇಲೆ ನನಗೆ ಸಹಿ ಮಾಡಲು ಅಂಬಾದಾಸಾ ಮತ್ತು ರವಿ ಮೇಸ್ತ್ರಿ ರವರು ಹೇಳಿರುತ್ತಾರೆ. ರವಿ ಮೇಸ್ತ್ರಿ ರವರು ನನಗೆ ಖರೀದಿ ಪತ್ರದ ಮೇಲೆ ಸಹಿ ಮಾಡಲು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಬರೆದಿರುವ ಆಸ್ತಿ ನಂಬರ ನನಗೆ ಗೊತ್ತಿಲ್ಲ. ರವಿ ಮೇಸ್ತ್ರಿ ರವರು ರೂ.6,20,000/- ಗಳನ್ನು ಅಂಬಾದಾಸರವರಿಗೆ ನೀಡಿರುತ್ತಾರೆ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತು ನನಗೆ ನ್ಯಾಯಾಲಯಕ್ಕೆ ಬಾ ಎಂದು ರವಿ ಮೇಸ್ತ್ರಿಯ ಮಗ ಹೇಳಿರುತ್ತಾನೆ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹಿತ ನಾನು ಸುಳ್ಳು ಸಾಕ್ಷ ಪ್ರಮಾಣ ಪತ್ರವನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

SD/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿಃ**